## ಮಾರ್ಚ್ 2022ರ ಮಾಹೆಯ ಪರ್ಯಾಯ ಶೈಕ್ಷಣಿಕ ಯೋಜನೆ

**ತರಗತಿ:–6ನೇ** **ವಿಷಯ:– ವಿಜ್ಞಾನ**

| ಕ್ರ ಸಂ | ತಿಂಗಳು/ ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 01 | ಮಾರ್ಚ್ ಮೊದಲನೇ ವಾರ<br><br>ಅಧ್ಯಾಯ:– ನಮ್ಮ ಸುತ್ತಲ ಗಾಳಿ | 1.ನಮ್ಮ ಸುತ್ತಲೂ ಗಾಳಿಇರುವುದನ್ನು ಅನ್ವೇಷಿಸಿ ಗಾಳಿಯ ಗುಣಲಕ್ಷಣಗಳನ್ನು ತಿಳಿಯುವರು. | 1.ವಿದ್ಯಾರ್ಥಿಗಳಿಗೆ ಬಣ್ಣದ ಕಾಗದ,ದಾರ,ಕಡ್ಡಿ ಇತ್ಯಾದಿಗಳನ್ನು ಬಳಸಿ ಗಾಳಿಪಟ/ಗಿರಗಿಟ್ಟಲೆಗಳನ್ನು ತಯಾರಿಸಿ ಶಾಲಾ ಆವರಣಕ್ಕೆ ತೆರಳಿ ಗಿರಗಿಟ್ಟಲೆಯ ಕಡ್ಡಿ ಹಾಗೂ ಗಾಳಿಪಟದ ದಾರವನ್ನು ಹಿಡಿದು ಅವುಗಳ ಚಲನೆಯಲ್ಲಿನ ಬದಲಾವಣೆಗಳನ್ನು ಚರ್ಚಿಸಲು ಶಿಕ್ಷಕರು ಅನುಕೂಲಿಸುವುದು.<br>2.ಗಾಳಿಗೆ ಬಣ್ಣ,ರುಚಿ,ನಿರ್ದಿಷ್ಟ ಆಕಾರ ಇಲ್ಲ ಎಂಬುದನ್ನು ತಿಳಿಸುತ್ತಾ ಗಾಳಿಗೆ ತೂಕವಿದೆ ಎಂಬುದನ್ನು ಬಲೂನ್,ದಾರ,ಕಡ್ಡಿಗಳನ್ನು ಬಳಸಿ ಪ್ರಾಯೋಗಿಕವಾಗಿ ತಿಳಿಯಲು ಸಹಕರಿಸುವುದು ಹಾಗೂ ಗಾಳಿಯು ಸ್ಥಳವನ್ನು ಆಕ್ರಮಿಸುತ್ತದೆ ಎಂಬುದನ್ನು ಪಠ್ಯ ಪುಸ್ತಕದಲ್ಲಿನ ಚಟುವಟಿಕೆ–2ನ್ನು ನಿರ್ವಹಿಸಲು ತಿಳಿಸುವುದು.<br>ಅಭ್ಯಾಸ ಹಾಳೆ–1 ನ್ನು ನಿರ್ವಹಿಸುವುದು. | 1.ಗಾಳಿ ಇರುವಿಕೆಯ ಅನುಭವವನ್ನು ನೀಡುವ ವಿವಿಧ ಸಂದರ್ಭಗಳನ್ನು ತಿಳಿಸಿ.<br><br>2.ಗಾಳಿಯ ವಿವಿಧ ಗುಣಲಕ್ಷಣಗಳನ್ನು ಪಟ್ಟಿಮಾಡಿ.<br><br>3.ವಾತಾವರಣ ಎಂದರೇನು? |
| | | 2.ಗಾಳಿಯಲ್ಲಿನ ವಿವಿಧ ಘಟಕಗಳನ್ನು ಅರ್ಥೈಸುವುದು. | 1.ವಿದ್ಯಾರ್ಥಿಗಳಿಗೆ ಮುಂಜಾನೆ ಹೊರಗಿನ ವಾತಾವರಣದಲ್ಲಿರುವ ಸಸ್ಯಗಳ ಎಲೆಗಳು,ವಾಹನಗಳ ಮೇಲ್ಮೈಗಳನ್ನು ಗಮನಿಸಿ ಸ್ಪರ್ಷಿಸಲು ತಿಳಿಸಿ ಪಡೆದ ಅನುಭವವನ್ನು ತರಗತಿಯಲ್ಲಿ ಚರ್ಚಿಸದ ನಂತರ ಗಾಳಿಯಲ್ಲಿ ನೀರಾವಿ ಇದೆ ಎಂಬುದನ್ನು ಅರ್ಥೈಸುವುದು.<br>2. ಪಠ್ಯ ಪುಸ್ತಕದಲ್ಲಿನ ಚಟುವಟಿಕೆ–3ನ್ನು ನಿರ್ವಹಿಸಿ ಗಾಳಿಯಲ್ಲಿ ಆಕ್ಸಿಜನ್ ಹಾಗೂ ನೈಟ್ರೋಜನ್ ಇರುವುದನ್ನು ಪ್ರಾಯೋಗಿಕವಾಗಿ ತಿಳಿಯಲು ಅನುಕೂಲಿಸುವುದು.<br>3.ಒಣಗಿದ ಎಲೆ ಹಾಗೂ ಒಣಗಿದ ಇತರೆ ತ್ಯಾಜ್ಯಗಳನ್ನು ಸುಟ್ಟಾಗ ಉಂಟಾಗುವ ಹೊಗೆಯಲ್ಲಿ ಕಾರ್ಬನ್ ಡೈ ಆಕ್ಸೈಡ್,ಧೂಳಿನ | 4.ದಹನಾನುಕೂಲಿ ಎಂದು ಕರೆಯಲ್ಪಡುವ ಗಾಳಿಯ ಘಟಕ ಯಾವುದು?<br><br>5. ಪರ್ವತಾರೋಹಿಗಳು ತಮ್ಮೊಂದಿಗೆ ಆಮ್ಲಜನಕದ ಸಿಲಿಂಡರ್‌ನ್ನು ತೆಗೆದುಕೊಂಡು ಹೋಗಲು ಕಾರಣವೇನು? |

| | | | | |
|---|---|---|---|---|
| | | | ಸಣ್ಣಕಣಗಳು ಇರುವುದನ್ನು ಅರ್ಥೈಸುವುದು.<br>ಪಠ್ಯ ಪುಸ್ತಕದಲ್ಲಿನ ಚಟುವಟಿಕೆ–4 ರಲ್ಲಿರುವಂತೆ ಗಮನಿಸುವುದು ಹಾಗೂ ಸೂಚಿತ ಯೋಜನಾ ಕಾರ್ಯ ಮತ್ತು ಚಟುವಟಿಕೆ 1 ಮತ್ತು 2ನ್ನು ನಿರ್ವಹಿಸುವುದು.<br>ಅಭ್ಯಾಸ ಹಾಳೆ–2 ನ್ನು ನಿರ್ವಹಿಸುವುದು. | 6.ದಹನ ನಿಯಂತ್ರಿಸುವ ಗಾಳಿಯ ಘಟಕ ಯಾವುದು?<br><br>7.ಟ್ರಾಫಿಕ್ ಪೋಲಿಸರು ಮುಸುಕನ್ನು ಧರಿಸಲು ವೈಜ್ಞಾನಿಕ ಕಾರಣ ಕೊಡಿ. |
| | ಮಾರ್ಚ್ ಎರಡನೇ ವಾರ | 3.ನೀರು ಮತ್ತು ಮಣ್ಣಿನಲ್ಲಿರುವ ಪ್ರಾಣಿ ಮತ್ತು ಸಸ್ಯಗಳಿಗೆ ಆಕ್ಸಿಜನ್‌ನ ಅವಶ್ಯಕತೆ ಇದೆ ಎಂಬುದನ್ನು ತಿಳಿಯುವರು | 1.ನೀರಿನ ಅಣುಸೂತ್ರವನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿ,ನೀರು ಹೈಡ್ರೋಜನ್ ಹಾಗು ಆಕ್ಸಿಜನ್‌ಗಳ ಸಂಯುಕ್ತ ಎಂಬುದನ್ನು ತಿಳಿಸಿ, ನೀರಿನಲ್ಲಿ ವಾಸಿಸುವ ಪ್ರಾಣಿ ಮತ್ತು ಸಸ್ಯಗಳು ನೀರಿನಲ್ಲಿರುವ ಆಕ್ಸಿಜನ್‌ನ್ನು ಬಳಸಿಕೊಂಡು ಉಸಿರಾಡುತ್ತವೆ ಎಂಬುದನ್ನು ಅರ್ಥೈಸುವುದು.<br>ಮಣ್ಣು ಮತ್ತು ನೀರಿನಲ್ಲಿ ಗಾಳಿ ಕರಗಿದೆ ಎಂಬುದನ್ನು ಪಠ್ಯ ಪುಸ್ತಕದಲ್ಲಿನ ಚಟುವಟಿಕೆ–5 ಮತ್ತು 6ನ್ನು ನಿರ್ವಹಿಸಿ ಗಮನಿಸಲು ಸೂಚಿಸುವುದು. | 8.ನೀರನ್ನು ಕುದಿಸಿದಾಗ ಗುಳ್ಳೆಗಳು ಹೊರಬರಲು ವೈಜ್ಞಾನಿಕ ಕಾರಣ ಕೊಡಿ.<br><br>9.ಮಣ್ಣಿನಲ್ಲಿ ಗಾಳಿಯ ಇರುವಿಕೆಯನ್ನು ಹೇಗೆ ಪತ್ತೆಮಾಡುವಿರಿ ವಿವರಿಸಿ. |
| | | 4.ಸಸ್ಯ ಮತ್ತು ಪ್ರಾಣಿಗಳ ನಡುವಿನ ಪರಸ್ಪರ ಅವಲಂಬನೆಯನ್ನು ತಿಳಿದು,ವಾತವರಣದಲ್ಲಿ ಆಕ್ಸಿಜನ್ ಮರುಪೂರೈಕೆಯಾಗುವ ವಿಧಾನಗಳನ್ನು ಗುರುತಿಸುವರು. | 1.ಧ್ಯುತಿಸಂಶ್ಲೇಷಣಾ ವಿಧಾನವನ್ನು ವಿಧ್ಯಾರ್ಥಿಗಳಿಗೆ ಅರ್ಥೈಸಿ ಸಸ್ಯ ಮತ್ತು ಪ್ರಾಣಿಗಳ ನಡುವಿನ ಪರಸ್ಪರ ಅವಲಂಬನೆಯನ್ನು ಪ್ರಶಂಸಿಸಲು ಅನುಕೂಲಿಸುವುದು. | 10. ವಾತವರಣದಲ್ಲಿನ ಆಕ್ಸಿಜನ್ ಮರುಪೂರೈಕೆಯಲ್ಲಿ ಧ್ಯುತಿಸಂಶ್ಲೇಷಣಾ ಕ್ರಿಯೆಯ ಪ್ರಮುಖ ಪಾತ್ರವನ್ನು ವಿವರಿಸಿ. |
| | | 3.ಗಾಳಿಯ ವಿವಿಧ ಉಪಯೋಗಗಳನ್ನು ಪಟ್ಟಿಮಾಡುವರು. | 1. ವಿಧ್ಯಾರ್ಥಿಗಳನ್ನು ಗುಂಪುವಾರು ವಿಂಗಡಿಸಿ ಗಾಳಿಯ ವಿವಿಧ ಉಪಯೋಗಗಳ ಬಗ್ಗೆ ಚರ್ಚಿಸಿ ಪಟ್ಟಿಮಾಡಲು ಅನುಕೂಲಿಸುವುದು. | 11.ಪವನಯಂತ್ರ ಮಾದರಿಯನ್ನು ತಯಾರಿಸಿ, ಕಾರ್ಯವಿಧಾನವನ್ನು ವಿವರಿಸಿ. |

| | | | | |
|---|---|---|---|---|
| | | | TEACHOPIA ಆಪ್‌ನಲ್ಲಿ "ನಮ್ಮ ಸುತ್ತಲ ಗಾಳಿ" ಪಠ್ಯಾಂಶಕ್ಕೆ ಸಂಬಂಧಿಸಿದಂತೆ ಪಾಠ ಟಿಪ್ಪಣಿ,ಅಭ್ಯಾಸ ಹಾಳೆಗಳನ್ನು ಬಳಸಿಕೊಂಡು ಕಲಿಕೆಗೆ ಅನುಕೂಲಿಸುವುದು.<br><br>ಕೆಳಗಿನ ಇ–ಸಂವೇದ ತರಗತಿಯ ವಿಡಿಯೋ ಲಿಂಕ್ ಅನ್ನು ಬಳಸಿಕೊಂಡು "ನಮ್ಮ ಸುತ್ತಲ ಗಾಳಿ" ಪಾಠವನ್ನು ವೀಕ್ಷಿಸಿ ಅದರಲ್ಲಿನ ಚಟುವಟಿಕೆಗಳನ್ನು ನಿರ್ವಹಿಸಲು ಸಹಕರಿಸೋಣ.<br>https://youtu.be/RiLK2bYNu-I<br><br>ದೀಕ್ಷಾ ಆಪ್‌ನಲ್ಲಿ "ನಮ್ಮ ಸುತ್ತಲ ಗಾಳಿ" ಪಾಠಕ್ಕೆ ಸಂಬಂಧಿಸಿದಂತೆ ವೀಕ್ಷಿಸಿ ಇನ್ನೂ ಹೆಚ್ಚಿನ ಕಲಿಕೆಗೆ ಅನುಕೂಲಿಸುವುದು. | |
| | ಮಾರ್ಚ್ ಮೂರನೇ ವಾರ<br><br>ಅಧ್ಯಾಯ:– ಒಳಬರುವ ಕಸ,ಹೊರ ಹೋಗುವ ಕಸ | 1.ಕಸದ ನಿರ್ವಹಣೆ ಹಾಗೂ ನೆಲಭರ್ತಿಯ ಅರ್ಥತಿಳಿಯುವರು.<br><br>2.ಮಿಶ್ರಗೊಬ್ಬರ ಮಾಡುವ ವಿಧಾನವನ್ನು ಅರಿಯುವರು.<br><br>3.ಎರೆಗೊಬ್ಬರ | 1.ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ತಮ್ಮ ಮನೆಗಳಲ್ಲಿ ಉತ್ಪತ್ತಿಯಾಗುವ ಒಣ ಹಾಗೂ ಹಸಿ ಕಸಗಳನ್ನು ಪ್ರತ್ಯೇಕವಾಗಿ ಪಟ್ಟಿಮಾಡಿ. ತರಗತಿಯಲ್ಲಿ ಅದರ ನಿರ್ವಹಣೆಯ ಬಗ್ಗೆ ಗುಂಪಿನಲ್ಲಿ ಚರ್ಚಿಸಲು ಅವಕಾಶ ನೀಡಿ ಅರ್ಥೈಸಿಕೊಳ್ಳಲು ಅನುಕೂಲಿಸುವುದು.<br>ಅಭ್ಯಾಸ ಹಾಳೆ–3ನ್ನು ನಿರ್ವಹಿಸುವುದು.<br><br>1.ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಂಗಡಿಸಿ ಪಠ್ಯ ಪುಸ್ತಕದಲ್ಲಿನ ಚಟುವಟಿಕೆ–1ನ್ನು ನಿರ್ವಹಿಸಿ ಕೋಷ್ಟಕವನ್ನು ಭರ್ತಿ ಮಾಡಲು ಅನುಕೂಲಿಸುವುದು.<br>2.ಶಿಕ್ಷಕರ ಮಾರ್ಗದರ್ಶನದಲ್ಲಿ ಪಠ್ಯ ಪುಸ್ತಕದಲ್ಲಿನ ಚಟುವಟಿಕೆ–2ನ್ನು | 1."ಸ್ವಚ್ಛ ಭಾರತ ಮಿಷನ್" ಈ ಅಭಿಯಾನದ ಗುರಿ ಭಾರತವನ್ನು ಯಾವುದರಿಂದ ಮುಕ್ತ ಮಾಡುವುದು ಎಂಬುದಾಗಿದೆ.<br>2.ಮರುಬಳಕೆ ಮಾಡಬಹುದಾದ ಕಸಗಳನ್ನು ಪಟ್ಟಿ ಮಾಡಿ.<br><br>3.ಮಿಶ್ರಗೊಬ್ಬರ ಎಂದರೇನು?<br><br>4.ಎರೆಗೊಬ್ಬರ ಮಾಡುವಿಕೆ ಎಮದರೇನು? |

| | | | | |
|---|---|---|---|---|
| | ಮಾರ್ಚ್ ನಾಲ್ಕನೇ ವಾರ | ತಯಾರಿಸುವ ಕ್ರಮವನ್ನು ತಿಳಿಯುವರು.<br><br>1.ಕಾಗದದ ಮರುಚಕ್ರೀಕರಣದ ಬಗ್ಗೆ ಅರ್ಥೈಸಿಕೊಳ್ಳುವುದು.<br><br>2.ಪ್ಲಾಸ್ಟಿಕ್‌ನಿಂದಾಗುವ ಅನುಕೂಲ ಹಾಗೂ ಅನಾನುಕೂಲಗಳನ್ನು ತಿಳಿಯುವರು. | ನಿರ್ವಹಿಸುವುದು.<br><br>1.ಶಿಕ್ಷಕರು ಪಠ್ಯಪುಸ್ತಕದಲ್ಲಿ ನೀಡಿರುವ ಮಾಹಿತಿಯನ್ನು ಬಳಸಿಕೊಂಡು ಕಾಗದದ ಮರುಚಕ್ರೀಕರಣ ಕ್ರಿಯೆಯನ್ನು ನಿರ್ವಹಿಸಲು ವಿದ್ಯಾರ್ಥಿಗಳಿಗೆ ಅನುಕೂಲಿಸುವುದು.<br><br>2.ಪ್ರತಿನಿತ್ಯ ಬಳಸುವ ವಿವಿಧ ರೀತಿಯ ಪ್ಲಾಸ್ಟಿಕ್ ವಸ್ತುಗಳನ್ನು ಪಟ್ಟಿ ಮಾಡಿ ಆ ವಸ್ತಗಳ ಬದಲಿಗೆ ಇನ್ನಿತರೆ ಪದಾರ್ಥಗಳಿಂದ ಮಾಡಿರುವ ವಸ್ತಗಳ ಬಳಕೆಯ ಬಗ್ಗೆ ಗುಂಪಿನಲ್ಲಿ ಚರ್ಚಿಸಿ, ಪ್ಲಾಸ್ಟಿಕ್‌ನಿಂದಾಗುವ ಅನುಕೂಲ ಹಾಗೂ ಅನಾನುಕೂಲಗಳನ್ನು ತಿಳಿಯಲು ಶಿಕ್ಷಕರು ಅನುಕೂಲಿಸುವುದು.<br><br>TEACHOPIA ಆಪ್‌ನಲ್ಲಿ "ಒಳಬರುವ ಕಸ,ಹೊರ ಹೋಗುವ ಕಸ" ಪಠ್ಯಾಂಶಕ್ಕೆ ಸಂಬಂಧಿಸಿದಂತೆ ಪಾಠ ಟಿಪ್ಪಣಿ,ಅಭ್ಯಾಸ ಹಾಳೆಗಳನ್ನು ಬಳಸಿಕೊಂಡು ಕಲಿಕೆಗೆ ಅನುಕೂಲಿಸುವುದು.<br><br>ಕೆಳಗಿನ ಇ–ಸಂವೇದ ತರಗತಿಯ ವಿಡಿಯೋ ಲಿಂಕ್ ಅನ್ನು ಬಳಸಿಕೊಂಡು "ಒಳಬರುವ ಕಸ,ಹೊರ ಹೋಗುವ ಕಸ" ಪಾಠವನ್ನು ವೀಕ್ಷಿಸಿ ಅದರಲ್ಲಿನ ಚಟುವಟಿಕೆಗಳನ್ನು ನಿರ್ವಹಿಸಲು ಸಹಕರಿಸೋಣ.<br>https://youtu.be/yequtUFJNGo<br>https://youtu.be/fW94o9CeL-0 | 1.ಕಾಗದದ ಮರುಚಕ್ರೀಕರಣದಿಂದಾಗುವ ಅನುಕೂಲಗಳಾವುವು?<br><br>2."ಪ್ಲಾಸ್ಟಿಕ್‌ಗಳು–ವರವೋ ಅಥವಾ ಶಾಪವೋ?" ಎಂಬ ವಿಷಯದ ಬಗ್ಗೆ ಚರ್ಚೆಯನ್ನು ಆಯೋಜಿಸುವುದು.<br><br>3.ಪ್ಲಾಸ್ಟಿಕ್‌ಗಳ ಅತಿ ಬಳಕೆಯನ್ನು ಕಡಿಮೆ ಮಾಡಲು ಮತ್ತು ಕಸವನ್ನು ನಿರ್ವಹಿಸಲು ನೀವು ಯಾವ ಯಾವ ಕ್ರಮಗಕೈಗೊಳ್ಳನ್ನು ಕೈಗೊಳ್ಳುವಿರಿ? |

## ಮಾರ್ಚ್ 2022ರ ಮಾಹೆಯ ಪರ್ಯಾಯ ಶೈಕ್ಷಣಿಕ ಯೋಜನೆ

**ತರಗತಿ:– 6ನೇ** **ವಿಷಯ:– ವಿಜ್ಞಾನ**

### ಅಭ್ಯಾಸ ಹಾಳೆ–01

**ಈ ಕೆಳಗಿನ ಹೇಳಿಕೆಗಳನ್ನು ಸೂಕ್ತ ಚಿತ್ರದ ಮುಂದೆ ಹೊಂದಿಸಿ ಬರೆಯಿರಿ.**

- ಗಾಳಿಗೆ ತೂಕವಿದೆ
- ಗಾಳಿಯು ಸ್ಥಳವನ್ನು ಆಕ್ರಮಿಸುತ್ತದೆ
- ಗಾಳಿಯಲ್ಲಿರುವ ದೂಳಿನ ಕಣಗಳು
- ವಸ್ತುಗಳು ಉರಿಯಲು ಆಕ್ಸಿಜನ್ ಅವಶ್ಯಕ









## ಮಾರ್ಚ್ 2022ರ ಮಾಹೆಯ ಪರ್ಯಾಯ ಶೈಕ್ಷಣಿಕ ಯೋಜನೆ

**ತರಗತಿ:– 6ನೇ** **ವಿಷಯ:– ವಿಜ್ಞಾನ**

**ಅಭ್ಯಾಸ ಹಾಳೆ–02**

**ಕೆಳಗಿನ ಪೈ ನಕ್ಷೆಯಲ್ಲಿ ಗಾಳಿಯ ಘಟಕಗಳಾದ .ನೈಟ್ರೋಜನ್, ಆಕ್ಸಿಜನ್, ಕಾರ್ಬನ್ ಡೈಆಕ್ಸೈಡ್ ಮತ್ತು ಇತರ ಅನಿಲಗಳು ಇವುಗಳನ್ನು ಪ್ರಮಾಣಕ್ಕನುಗುನವಾಗಿ ಗುರುತಿಸಿ ಬರೆಯಿರಿ.**



**ಮಾರ್ಚ್ 2022ರ ಮಾಹೆಯ ಪರ್ಯಾಯ ಶೈಕ್ಷಣಿಕ ಯೋಜನೆ**

**ತರಗತಿ:– 6ನೇ** **ವಿಷಯ:– ವಿಜ್ಞಾನ**

**ಅಭ್ಯಾಸ ಹಾಳೆ–03**

**ಒಣಕಸ, ಹಸಿಕಸ, ವಿಷಕಾರಿ ಕಸ, ಮಲಿನ ಕಸಗಳಿಗೆ ಸೇರುವ ಪದಾರ್ಥಗಳನ್ನು ಪ್ರತ್ಯೇಕವಾಗಿ ಈ ಕೆಳಗಿನ ಕೋಷ್ಟಕದಲ್ಲಿ ಬರೆಯಿರಿ.**

| ಕ್ರ.ಸಂ | ಒಣಕಸ | ಹಸಿಕಸ | ವಿಷಕಾರಿ ಕಸ | ಮಲಿನ ಕಸ |
|---|---|---|---|---|
| | | | | |

**ಮಾರ್ಚ್ 2022ರ ಮಾಹೆಯ ಪರ್ಯಾಯ ಶೈಕ್ಷಣಿಕ ಯೋಜನೆ**

**ತರಗತಿ:– 6ನೇ** **ವಿಷಯ:– ವಿಜ್ಞಾನ**

**ಅಭ್ಯಾಸ ಹಾಳೆ–04**

**“ಪರಿಸರದಲ್ಲಿ ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳು” ಈ ವಿಷಯ ಕುರಿತು ಪ್ರಬಂಧವನ್ನು ಬರೆಯಿರಿ.**